ಭಾರತೀಯ ಚಿತ್ರಕಲಾಪರಂಪರೆಯಲ್ಲಿ ಮೊದಲಬಾರಿಗೆ ಕಲಾವಿದನಾಗಿ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡ ಕಲಾವಿದ ಕೂಡ. ನೀವು ಜನಪದ ಚಿತ್ರಕಲೆಯನ್ನು ನೋಡಿ, ಅಲ್ಲಿ ಧರ್ಮದ ಹಸ್ತಕ್ಷೇಪ ಅಷ್ಟಾಗಿ ಇಲ್ಲ. ಆಚರಣೆಗಳನ್ನು ಚಿತ್ರಗಳಾಗಿಸಿದ್ದಾರೆ. ಆದರೆ ಬಹುತೇಕವಾಗಿ ಜನಸಾಮಾನ್ಯರ ದುಃಖದುಮ್ಮಾನಗಳು, ಸಂಭ್ರಮಗಳು ಚಿತ್ರಗಳಾಗಿವೆ. ಯಾಕೆಂದರೆ, ಅವರ ಮೇಲೆ ಯಾರ ಒತ್ತಡವೂ ಇರಲಿಲ್ಲ. ಪ್ರಾಣಿ ಪಕ್ಷಿಗಳೆಲ್ಲಾ ಚಿತ್ರಿತಗೊಂಡಿವೆ. ವರ್ಲಿ ಪೇಂಟಿಂಗ್ ನೋಡಿ, ಮಧುಬನಿ ಪೇಂಟಿಂಗ್ ನೋಡಿ, ಗೋಂಡ್ ಚಿತ್ರಕಲೆ ನೋಡಿ, ಆದಿವಾಸಿಗಳ ಚಿತ್ರಗಳನ್ನು ಗಮನಿಸಿ. ಭಾರತದ ತುಂಬ ಎಲ್ಲೆಡೆಗೂ ಇಂಥ ಸಮುದಾಯದ ಚಿತ್ರಕಲಾ ಪರಂಪರೆಗಳಿವೆ. ಮನೆಗಳ ಮಾಳಿಗೆ ಮೇಲೆ, ಗೋಡೆಗಳ ಮೇಲೆ, ಎತ್ತಿನ ಬಂಡಿಗಳ ಮೇಲೆ, ದನಗಳ ಮೇಲೆ, ಹೊಸ್ತಿಲ ಮೇಲೆ ಎಲ್ಲೆಂದರಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಅವುಗಳಲ್ಲಿ ಒಂದು ದೈನಂದಿನ ಜೀವನವಿದೆ, ತಾಯಿ ಮಗುವಿನ ಸಂಬಂಧವಿದೆ, ನಾಯಿ ಕೋಳಿಗಳೆಲ್ಲಾ ಬಂದಿವೆ. ಅಡುಗೆ ಮಾಡುವ ಹೆಣ್ಣುಮಕ್ಕಳಿದ್ದಾರೆ, ನೀರು ತರುವ ಹೆಂಗಸರಿದ್ದಾರೆ. ನಾನೊಂದು ಚಿತ್ರ ನೋಡಿದೆ. ಅಲ್ಲಿ ಹೊಲದಲ್ಲಿ ಬೆಳೆದ ಫಸಲನ್ನು ತೋರಿಸಲಾಗಿದೆ. ಇನ್ನೊಂದು ಚಿತ್ರದಲ್ಲಿ ಸತ್ತಹಾವಿನ ಚಿತ್ರವಿದೆ. ಮತ್ತೊಂದರಲ್ಲಿ ಮಕ್ಕಳು ವೃತ್ತಾಕಾರದಲ್ಲಿ ಅಸ್ತವ್ಯಸ್ತವಾಗಿ ಕುಣಿಯುತ್ತಿದ್ದಾರೆ. ಇಲ್ಲಿ ದೇವಾನುದೇವತೆಗಳಿಲ್ಲ. ಜೀವನದ ವಿವಿಧ ಬಣ್ಣಗಳಿವೆ. ಇದರ ಬಗ್ಗೆ ನಾವ್ಯಾರೂ ಗಮನಹರಿಸಲಿಲ್ಲ. ಯಾವುದೇ ಚಿತ್ರಕಲೆ ನಿಜವಾಗಿ ವಿಕಾಸಗೊಳ್ಳುವುದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ.

◆ **ಭಾರತದ ಚಿತ್ರಕಲಾ ಜಗತ್ತನ್ನು ದುರ್ಬಲಗೊಳಿಸಿದ ಮೂರು ಸಂಗತಿಗಳನ್ನು ನೀವು ಪ್ರಸ್ತಾಪಿಸಿದ್ದೀರಿ; ಧರ್ಮ, ರಾಷ್ಟ್ರೀಯತೆ ಮತ್ತು ವ್ಯಾಪಾರ. ಯಾಕೆ ಈ ಸಂಗತಿಗಳು ದುರ್ಬಲಗೊಳಿಸಿದವು ಅಂತ ಅನಿಸುತ್ತೆ?**

ಬಹಳ ಜನ ಹೇಳುತ್ತಾರೆ, ಪೇಂಟಿಂಗ್ ಅರ್ಥವಾಗುತ್ತಿಲ್ಲ ಅಂತ. ಆದರೆ ಪೇಂಟಿಂಗ್ ಅರ್ಥಮಾಡಿಕೊಳ್ಳುವ ಸಂಗತಿಯಲ್ಲ, ಅದು ಅನುಭವಿಸುವ ಸಂಗತಿ. ಸಾಮಾನ್ಯವಾಗಿ ಪೇಂಟಿಂಗ್ ಅರ್ಥಮಾಡಿಕೊಳ್ಳಬೇಕೆಂದು ಯಾರು ಹೇಳುತ್ತಾರೆ?; ಧರ್ಮವನ್ನು ಗುತ್ತಿಗೆ ಹಿಡಿದವರು ಮತ್ತು ಅಧಿಕಾರಸ್ಥರು. ಅದನ್ನು ಹೀಗೇ ಅರ್ಥಮಾಡಿಕೊಳ್ಳಿರೆಂದು ಫರ್ಮಾನು ಹೊರಡಿಸುತ್ತಾರೆ. ನಿರಕ್ಷರಸ್ಥರನ್ನು ಹಿಡಿದಿಟ್ಟುಕೊಳ್ಳುವ ಒಂದು ಮಾರ್ಗ ಕೂಡ ಇದಾಗಿತ್ತು. ಜೊತೆಗೆ ಧರ್ಮ ಪ್ರಚಾರಕ್ಕೆ ಇದು ಸುಲಭದ ಮಾರ್ಗವಾಗಿತ್ತು. ಜಗತ್ತಿನಲ್ಲಿ ಎಲ್ಲಾ ಧರ್ಮಗಳು ಚಿತ್ರಕಲೆಯ ಅನುಭವವನ್ನು ಸಂಕುಚಿತವಾಗಿಸಿದವು. ಅವುಗಳಿಗೆ ಸಂಕುಚಿತ ಅರ್ಥಗಳನ್ನು ಕಟ್ಟಿದವು. ಚಿತ್ರಕಲೆಯನ್ನು ಧರ್ಮಗಳು ದುರುಪಯೋಗ ಮಾಡಿಕೊಂಡಷ್ಟು ಬೇರೆ ಯಾವುದೂ ಮಾಡಿಕೊಳ್ಳಲಿಲ್ಲ. ಸಾಮಾನ್ಯವಾಗಿ ಭಾರತೀಯ ಜನರು ಚಿತ್ರಕಲೆಗಳನ್ನು ತಮಗೆ ಗೊತ್ತಿರುವ ಪುರಾಣ ಕಥೆಗಳ ಭಾಗವಾಗಿ ನೋಡುತ್ತಾರೆ. ಆ ಕಥೆ ಇಲ್ಲಿ ಸ್ಪಷ್ಟವಾಗಿ ಬಂದಿದೆಯೊ ಇಲ್ಲವೊ? ತನಗೆ ಗೊತ್ತಿರುವ ಚರಿತ್ರೆ ಇಲ್ಲಿ ಸ್ಪಷ್ಟವಾಗಿ ಬಂದಿದೆಯೊ ಇಲ್ಲವೊ? ರಾಜಾರವಿವರ್ಮಾ ಒಂದು ಕಡೆ ಬರೆದುಕೊಂಡಿದ್ದಾರೆ. ಅವರು ರಾಜಸ್ಥಾನದ ಒಬ್ಬ ದೊರೆಯ ಚಿತ್ರ ತೆಗೆಯಲು ಹೋಗಿದ್ದರಂತೆ. ಆದರೆ ಆ ಅರಸ ನರಪೇತಲನಂತಿದ್ದ. ಯಾವ ಮಗ್ಗುಲಿನಿಂದಲೂ ಅವನು ಅರಸನಂತೆ ಕಾಣುತ್ತಿಲ್ಲ. ಅವನನ್ನು ಕೂಡಿಸಿಕೊಂಡು ರಾಜಾರವಿವರ್ಮಗೆ ಚಿತ್ರ ತೆಗೆಯಲು ಆಗುತ್ತಿಲ್ಲ. ಹೀಗಾಗಿ ಅವರು ಆ ಅರಮನೆಯ ದಷ್ಟಪುಷ್ಟ ಆಳನ್ನು ಕರೆದು ಅವನಿಗೆ ರಾಜಪೋಷಾಕು ತೊಡಿಸಿ ಚಿತ್ರ ತೆಗೆಯುತ್ತಾರೆ. ನಂತರ ಮತ್ತೆ ನಿಜವಾದ ಅರಸನನ್ನು ಕೂಡಿಸಿ ಅವನ ಮುಖವನ್ನು ಚಿತ್ರಿಸುತ್ತಾರೆ. ಯಾಕೆಂದರೆ ರಾಜಮನೆತನಗಳು ಬರುವ ಪೀಳಿಗೆಯ ನೆನಪಿನಲ್ಲಿ ತಮ್ಮ ಪ್ರಭಾವಶಾಲಿ ಚಿತ್ರಗಳನ್ನು ದಾಖಲಿಸಲು ಹಂಬಲಿಸಿದವು. ಈಗ ಹೇಗಿರುವರೋ ಅದು ಅವರಿಗೆ ಮುಖ್ಯವಾಗಿರಲಿಲ್ಲ. ನಾನು ಕಥೆ ಕಟ್ಟಿ ಹೇಳುತ್ತಿಲ್ಲ.

ಚಿತ್ರಕಲೆಗೆ ಸಂಬಂಧಿಸಿದಂತೆ ಇಸ್ಲಾಮಿಕ್ ದೇಶಗಳು ಬಚಾವಾದವು. ಯಾಕೆಂದರೆ, ಅಲ್ಲಿ ಚಿತ್ರಕಲೆ ನಿಷಿದ್ಧ. ಅಲ್ಲಿ ಅಕ್ಷರಗಳು ಅಥವಾ ಹೂಬಳ್ಳಿಗಳು ಮಾತ್ರ ಇವೆ. ಯಾವುದೇ ದರ್ಗಾದ ಒಳಭಾಗದಲ್ಲಿ ನೋಡಿ, ಹೆಚ್ಚುಕಡಿಮೆ ಒಂದೇ ತರಹದ ಹೂಬಳ್ಳಿಗಳಿವೆ. ಅಲ್ಲಿ ವೈವಿಧ್ಯಕ್ಕೆ ಅವಕಾಶವಿಲ್ಲ. ಇದನ್ನು ಹೊರತುಪಡಿಸಿದರೆ ಅವರು ಬೇರೆಯದನ್ನು ಚಿತ್ರಿಸುವಂತಿಲ್ಲ. ಯುರೋಪು ಕೂಡ ಒಂದು ಮಟ್ಟಿಗೆ ಬಚಾವಾಯಿತು. ಯಾಕೆಂದರೆ, ಅಲ್ಲಿನ ಚಿತ್ರಗಳ ಕೇಂದ್ರದಲ್ಲಿ ಇರುವುದು ಜೀಸಸ್